Other Department	
Secondary.—Does not arise since recruitment is done by P.S.C.	Provision has been made for the appointment of two non-official members on the Committees constituted as per Mysore State (Departmental Recruitment Committees) (Constitution and function) Rules, 1971, *vide* reply to clause (*b*).
No.	No.

RECRUITMENT COMMITTEES

388. SRI BAPU GOWDA (Shahapur).—

Will the Chief Minister be pleased to state:—

(*a*) whether during the President's Rule some recruitment Committees were constituted to fill up vacancies in various departments;

(*b*) if so, the number of recruitment committees constituted ;

(*c*) whether these committees are functioning at present ;

(*d*) if so, the procedure for recruiting candidates?

SRI H. M. CHANNABASAPPA (Minister for Public Works) [On behalf of SRI D. DEVARAJ URS.—(Chief Minister)]

(*a*) Yes.

(*b*) So far recruitment Committees have been constituted in respect of 52 departments.

(*c*) Yes.

(*d*) The procedure to be followed by the Committees is indicated in the Mysore State Civil Services (Recruitment Commitees) (Constitution and Function) Rules, 1971, a Copy of which is placed on the Table of the House. copy placed in the Mysore Ligislature Library vide No. 5

665. SRI G. PUTTASWAMY (Mudigere).—

Will the Chief Minister be pleased to state:—

(*a*) the number of Recruitment Committees constituted in the State for the purpose of filling up of the vacancies in the several Government Departments;

(b) when these Committees were constituted ; the object of the Government to form such Committees when there is Public Service Commission and District Employment Exchanges in the State ;

(c) whether it has come to the notice of the Government that most of the deserving candidates who have registered their names in the District Employment Exchange are not getting preference after the formation of the Departmental Recruitment Committees ?

SRI H. M. CHANNABASAPPA(Minister for Public Works)[On behalf of SRI D. DEVARAJ URS (Chief Minister)].—

(a) So far Recruitment Committees have been constituted for 52 departments of Government.

(b) These Committees were formed at different times between 2nd June 1971 and 7th March 1972. The Public Service Commission was the only agency attending to the work of regular recruitment to almost all posts in the State excluding those in class IV which are required to be filled through the Employment Exchanges. The object of forming these Committees is to avoid delay in recuitment to Class III posts at lower levels by decentralising the work as recommended by the Pay Commission.

(c) No. Such candidates can also apply to the Recruitment Committees whenever posts are advertised.

ಶ್ರೀ ಟಿ. ತಾರೇಗೌಡ.– ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆ ಗೆ ಆರಿಸಿಕೊಳ್ಳುವುದು ಪೂರ್ಣಗೊಂಡಿದೆಯೆ ಇಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಪೂರ್ಣಗೊಂಡಿದೆ.

ಶ್ರೀ ಟಿ. ತಾರೇಗೌಡ .— ತುಮಕೂರು ಡಿಸ್ಟ್ರಿಕ್ಟಿನವರು ಒಬ್ಬರೂ ಇಲ್ಲಿ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಡಿಸ್ಟ್ರಿಕ್ಟ್ ಆಧಾರದ ಮೇಲೆ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ರಿಕ್ರೂಟ್ ಮಾಡುವುದಿಲ್ಲ ಎನ್ನುತಕ್ಕುದನ್ನು ಮಾನ್ಯ ಸದಸ್ಯರು ತಿಳಿಯಬೇಕು.

ಶ್ರೀ ಟಿ. ತಾರೇಗೌಡ.—ಸಬ್‌ಇನ್ಸ್‌ಪೆಕ್ಟರ್ ಸೆಲೆಕ್ಷನ್‌ನಲ್ಲಿ ಲಂಚ ಬಹಳ ಜಾಸ್ತಿಯಾಗಿ ಒಬ್ಬೊಬ್ಬರನ್ನು ಸೆಲೆಕ್ಟ್ ಮಾಡುವುದಕ್ಕೆ ೧೦–೧೨ ಸಾವಿರ ರೂಪಾಯಿವರೆಗೆ ಕಲೆಕ್ಟ್ ಮಾಡಿಕೊಂಡಿರುವುದಾಗಿ ಜನಜನಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜನಜನಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆ ಬಗೆ ಕಂಪ್ಲೈಂಟ್ಸ್ ಬಂದಿವೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಬಾಪುಗೌಡ ರಾಯಪ್ಪ.— (ಅ) ಗೆ ಉತ್ತರ ಕೊಡುತ್ತಾ ೫೨ ಡಿಪಾರ್ಟ್‌ಮೆಂಟ್ ಕಮಿಟೀಸ್ ಕಾನ್ಸ್‌ಟ್ಯೂಟ್ ಮಾಡಿರುವುದಾಗಿ ಹೇಳಿದ್ದಾರೆ. ಪಬ್ಲಿಕ್ ಸರ್ವೀಸ್ ಕಮಿಷನ್ ಕೆಲಸ ಮಾಡುವ ಕಾಲಕ್ಕೆ ಡಿಪಾರ್ಟ್‌ಮೆಂಟಲ್ ಕಮಿಟಿಗಳನ್ನು ರಚನೆ ಮಾಡುವ ಅವಶ್ಯಕತೆ ಏನು?

ಶ್ರೀ ಎಚ್. ಎಂ. ಚನ್ನಬಸಪ್ಪ.— ೨೭ನೇ ಪ್ರಶ್ನೆಯಲ್ಲಿ ಅದರ ಅವಶ್ಯಕತೆ ಏನು ಎನ್ನುವುದು ಉಚ್ಚಾಗಿದೆ, ಓದಿದಲ್ಲಿ ಕಾಣುತ್ತದೆ.

ಶ್ರೀ ಬಾಪುಗೌಡ ರಾಯಪ್ಪ.— ಡಿಪಾರ್ಟ್‌ಮೆಂಟ್ ಕಮಿಟೀಸ್ ಕಾನ್ಸ್‌ಟ್ಯೂಟ್ ಆಗಿದೆ. ಪಬ್ಲಿಕ್ ಸರ್ವೀಸ್ ಕಮೀಷನ್ ಇಂಟರ್‌ವ್ಯೂಗೆ ಕಾಲ್‌ಫಾರ್ ಮಾಡಿ ಉದ್ಯೋಗಗಳನ್ನು ಭರ್ತಿ ಮಾಡಿಕೊಳ್ಳುವಾಗ ಅವರ ಕೆಲಸ ಮತ್ತು ಡಿಪಾರ್ಟ್‌ಮೆಂಟ್ ಕಮಿಟಿಗಳ ಕೆಲಸ ಡೂಪ್ಲಿಕೇಟ್ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಡೂಪ್ಲಿಕೇಟ್ ಆಗಿಲ್ಲ. ಅವರು ರಿಕ್ರೂಟ್ ಮಾಡುವ ಕ್ಲಾಸ್ ಆಫ್ ಸರ್ವೀಸಸ್ ಬೇರೆ, ಇವರು ರಿಕ್ರೂಟ್ ಮಾಡುವ ಕ್ಲಾಸ್ ಆಫ್ ಸರ್ವೀಸ್ ಬೇರೆ.

Asterisk indicate that remarks or speeches have not been revised by the member concened.

ಶ್ರೀ ಜಿ. ಪುಟ್ಟಸ್ವಾಮಿ.— ಒಟ್ಟಿನೇ ಪ್ರಶ್ನೆಯ (ಇ) ಗೆ ಉತ್ತರವಾಗಿ ಇಲಾಖೆ ನೇಮಕಾತಿ ಇಲ್ಲ ಎಂದು ಹೇಳಿದ್ದೀರಿ. ಡಿಪ್ಯೂಟ್ಯೇಷನ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸುಗಳಲ್ಲಿ ರಿಜಿಸ್ಟರ್ ಮಾಡಿಕೊಂಡಿರ ತಕ್ಕ ಉಮೇದುವಾರರಿಗೆ ಅನ್ಯಾಯವಾಗುತ್ತಾ ಇರುವುದನ್ನು ಸರ್ಕಾರದ ಗಮನಕ್ಕೆ ತಂದರೆ ಸರಿ ಮಾಡಲು ಶ್ರೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಹಾಗೆ ಅನ್ಯಾಯವಾಗುವುದಿಲ್ಲ. ರಿಜಿಸ್ಟರ್ ಮಾಡಿಕೊಂಡಿರುವವರು ಕೂಡ ಅಪ್ಲೈ ಮಾಡಬಹುದು.

ಶ್ರೀ ಜಿ. ಪುಟ್ಟಸ್ವಾಮಿ.—ಡಿಪ್ಯುಟ್ಯೇಷನ್ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಬಹಳ ವರ್ಷಗಳಿಂದ ರಿಜಿಸ್ಟರು ಮಾಡಿಕೊಂಡವರಿಗೆ ಕೆಲಸ ದೊರೆಯದೆ ರಿಕ್ರೂಟ್‌ಮೆಂಟ್ ಸಮಿತಿಗಳಲ್ಲಿ ಈಗತಾನೇ ರಿಜಿಸ್ಟರ್ ಮಾಡಿಕೊಂಡಿರುವವರಿಗೆ ಕೆಲಸ ಸಿಕ್ಕುತ್ತಾ ಇದೆ ಎಂದು ದೂರಂಗಳು ಬಂದಿವೆ. ಅವುಗಳನ್ನೆಲ್ಲಾ ವಿಚಾರ ಮಾಡುತ್ತೀರಾ ಎಂದು ಕೇಳುತ್ತೇನೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಕೊಂಡಿರ ತಕ್ಕವರೂ ಮಾಡದೆ ಇರತಕ್ಕವರು ಇವರೆಲ್ಲರೂ ಕೂಡ ಅಡ್ವರ್ಟೈಜ್ ಮಾಡಿದಾಗ ಅಪ್ಲೀಕೇಷನ್ ಹಾಕಿಕೊಳ್ಳುವುದಕ್ಕೆ ಅವಕಾಶ ಇದೆ. ಆದರಲ್ಲಿ ರೂಲ್ಸ್ ಪ್ರಕಾರವಾಗಿ ವಿಧಿ ನಿಯಮಗಳ ಪ್ರಕಾರ ಮೆರಿಟ್ ಮತ್ತು ಇತರ ಕನ್ಸಿಡರೇಷನ್ಸ್ ತೆಗೆದುಕೊಂಡು ತೀರ್ಮಾನವಾಗುತ್ತದೆ. ಆದುದರಿಂದ ಅದರಲ್ಲಿ ಅನ್ಯಾಯವಾಗುತ್ತದೆ ಎನ್ನುವ ಪ್ರಶ್ನೆ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.— ಅದರಲ್ಲಿ ಸೀನಿಯರ್ಸ್ ಮತ್ತು ಓವರ್ ಏಜ್ ಆಗಿರತಕ್ಕ ಉಮೇದುವಾರರು ಬಹಳ ವರ್ಷಗಳಿಂದ ರಿಜಿಸ್ಟರ್ ಮಾಡಿಕೊಂಡು ಕಾಯುತ್ತಿರುವವರಿಗೆ ನೌಕರಿ ದೊರೆಯದೆ ಇರುವ ಸಂದರ್ಭದಲ್ಲಿ ಏನು ಯೋಜನೆ ತಯಾರು ಮಾಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ. ...ಅವರು ಅಪ್ಲೈ ಮಾಡಿಕೊಳ್ಳುವುದಕ್ಕೆ ಯಾರ ಅಡ್ಡಿಯೂ ಇಲ್ಲ. ಅವರು ಅಪ್ಲೈ ಮಾಡಿಕೊಳ್ಳದೆ ಇದ್ದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ.

SRI D. B. KALMANKAR .—When the Public Service Commission was there to function and do its normal work, where was the need to appoint so many Recruitment Committees ?

SRI H. M. CHANNABASAPPA .—The hon member did not read the answer to (b) in Question 665. The object of these Committees is to avoid delay in recruitment to Class III posts at lower levels by decentralising the work as recommended by the Pay Commission.

SRI BAPU GOWDA RAYAPPA .—Are there any non-official members on these committees constituted for 52 Departments ?

SRI H. M. CHANNABASAPPA .—That is mentioned in answer to (c) of Question 288. Provision has been made for the appointment of 2 non-official members and further details are furnished in the answer.

ಶ್ರೀ ಎಫ್. ಎಸ್. ತಾವರೆ .—ಇದುವರೆಗೂ ಸರಕಾರದವರು ಯಾವ ರೀತಿ ಯೋಚನೆ ಮಾಡಿದ್ದರು ಎಂದರೆ ಯಾರು ಎಪ್ಲಾಯಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ರಿಜಿಸ್ಟರ್ ಮಾಡಿಸಿದ್ದಾರೋ ಅವರಿಗೇ ಮೊದಲು ನೇಮಿಸಿಕೊಳ್ಳಬೇಕು ಎಂದು ಅದನ್ನು ಈಗ ಸಡಿಲ ಮಾಡಿದ್ದಾರೋ ಹೇಗೆ? ಇಲ್ಲಿವೆ ಬೇರೆ ರೀತಿ ಪರವಾನಗಿ ಕೊಟ್ಟು ಇವರನು ನೇಮಿಸಿಕೊಳ್ಳುತ್ತಾರೆಯೇ ?

ಶ್ರಿ ಎಚ್. ಎಂ. ಚನ್ನಬಸಪ್ಪ .—ಎಂಪ್ಲಾಯಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಮಾಡಿಸಿಕೊಂಡಿರುವವರು ಯಾವುದಾದರು ಪೋಸ್ಟುಗಳಿಗೆ ಅಡವರ್ಟೈಸ್‌ಮೆಂಟ್ ಬಂದಾಗ ರೆಕ್ರೂಟ್‌ಮೆಂಟ್ ಕಮಿಟಿಯವರ ಕಡೆಗೆ ಅರ್ಜಿಗಳನ್ನು ಕಳುಹಿಸಿದರೆ ಅವರ ಅರ್ಜಿಗಳನ್ನೂ ಕನ್‌ಸಿಡರ್ ಮಾಡುತ್ತಾರೆ.

SRI RAJA PIDNAIK .—What is the purpose of registering names in the Employement Exchange if recruitment is made directly by the Committees ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಕಮಿಟಿಯವರು ಒಬ್ಬರೇ ಹೂಡುವುದಿಲ್ಲ. ಓಪನ್ ಮಾರ್ಕೆಟ್ ಹಲ್ಲಿ ಅಪ್ಲಿಕೇಷನ್ಸ್ ಕರೆಯುತ್ತಾರೆ. ಆಗ ಎಂಪ್ಲಾಯಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಮಾಡಿರುವವರೂ ಅರ್ಜಿಗಳನ್ನು ಕಳುಹಿಸಬೇಕು; ಇದರ ಜೊತೆಗೆ ಬೇರೆ ಲೋಕಲ್ ಕ್ಯಾಂಡಿಡೇಟ್‌ಗಳೂ ಅರ್ಜಿಗಳನ್ನು ಹಾಕುತ್ತಾರೆ. ಇದರಲ್ಲಿ ಅಯಾ ಇಲಾಖೆಯ ಮೂಲಕವೂ ಅರ್ಜಿಗಳು ಬರುತ್ತವೆ. ಇದರ ಮೇಲೆ ಲಿಸ್ಟುಗಳನ್ನು ಮಾಡುತ್ತಾರೆ.

SRI D. B. KALMANKAR .—I want to know whether these Recruitment Committees have called for applications as per registers maintained by the Employement Exchange; or ignoring the applications registered in the Employment Exchanges, have they made appoint ments arbitrarily ?

SRI H. M. CHANNABASAPPA .—No such arbitrary employment can be made by these Committees because their procedures are all groverned by Rules and while they call for certain number of people in certain categories, they will publicise and there have been both people who have registered in the Employment Exchange as well those ontside who apply and each one of them will have to take his chance on his own merits.

ಶ್ರೀ ಜಿ. ವೆಟ್ಟಸ್ವಾಮಿ .—ಎಂಪ್ಲಾಯಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಮಾಡಿಸಿಕೊಂಡಿರುವ ಅಭ್ಯರ್ಥಿಗಳ ವಿಚಾರವಲ್ಲಿ ರಿಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ಬರುವ ಅಭ್ಯರ್ಥಿಗಳಿಗಿಂತ ಒಂದು ರೀತಿಯಾಗಿ ವೇಟೇಜ್ ಕೊಟ್ಟು ಆದ್ಯತೆ ಕೊಡುವುದನ್ನು ಪರಿಶೀಲಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಯಾವುದೇ ಕಮಿಟಿಯಲ್ಲಿ ಆಗಲಿ ಇಲ್ಲವೇ ಬೇರೆ ಕಡೆ ಅರ್ಜಿಗಳು ಬಂದಾಗ ಅವುಗಳನ್ನು ವಿಧಿ ನಿಯಮಾವಳಿಗಳಿಗೆ ಅನುಸಾರವಾಗಿ ಪರಿಶೀಲನೆ ಮಾಡಬೇಕಾಗಿ ಬರುತ್ತದೆ. ಯಾರೊಬ್ಬರಿಗೂ ಇದರಲ್ಲಿ ಯಾವ ಕಾರಣದಿಂದಲೂ ಆದ್ಯತೆ ಕೊಡುವುದಕ್ಕಾಗುವುದಿಲ್ಲ, ಹಾಗೆ ಮಾಡಿದರೆ ಅದು ನ್ಯಾಯಕ್ಕೆ ವಿರೋಧವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ .—ಇದರಲ್ಲಿ ನಾನ್ ಆಫಿಷಿಯಲ್‌ಗಳನ್ನು ನೇಮಕ ಮಾಡುವಾಗ ಯಾವುದಾದರೂ ಯೂನಿಫಾರಂ ಪಾಲಿಸಿಯನ್ನು ಅನುಸರಿಸಲು ಸಾಧ್ಯವೇ ?

SRI H. M CHANNABASAPPA .—In almost all the department there is provision in the rules for appointment of non-officials. So far as the first item in the main Question, namely. Sub-Inspectors, are concerned, the rules of reeruitment are governed by the Police Act Recruitment Rules and there the non-officials do not come in

ಶ್ರೀ ಎಫ್. ಎಸ್. ಶಾಪರೆ .—ಇದುವರೆಗೂ ಎಂಪ್ಲಾಯಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಮಾಡಿದವರನ್ನೇ ಬೇರೆ ಕಡೆ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದರು. ಓಪನ್ ಮಾರ್ಕೆಟ್ಟಿನಿಂದ ಯಾರನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಇಲ್ಲಿನವರನ್ನು ತೆಗೆದುಕೊಂಡ ಮೇಲೆ ಬೇರೆ ಕಡೆಗಳಿಂದ ನೇಮಕ ಮಾಡುತ್ತಿದ್ದರು, ಇದನ್ನು ಸರಕಾರ ಈಗ ಕೈಬಿಟ್ಟಿದೆಯೇ ಹೇಗೆ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಇದು ಮಾನ್ಯ ಸದಸ್ಯರ ತಿಳಿವಳಿಕೆ.

SRI D. B. KALMANKAR .—I wish to know whether Government will consider a suggestion to abolish all these Recruitment Committees and to make all recruitments in future only through the Public Service Commission ?

SRI H. M. CHANNABASAPPA .—Well, Government are not of that view.

ಶ್ರೀ ಟಿ. ತಾರೇಗೌಡ .—ಈಗ ನಡೆದಿರುವ ಆಯ್ಕೆಯಲ್ಲಿ ಲಂಚರುಷುವತ್ತುಗಳು ಹೆಚ್ಚಾಗಿ ನಡೆದಿರುವುದರಿಂದ ಅನೇಕ ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರೂ ಅವರಿಗೆ ಅವಕಾಶ ಸಿಗಲಿಲ್ಲ ಎಂಬುದಾಗಿ ಬಹಳ ನೊಂದು ನಮ್ಮ ಕಡೆಗೆ ಬಂದು ವಿಚಾರಗಳನ್ನು ತಿಳಿಸಿರುವುದರಿಂದ ಇದರ ಬಗ್ಗೆ ಒಂದು ಎನ್‌ಕ್ವೈರಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಸಬ್ ಇನ್‌ಸ್ಪೆಕ್ಟರ್‌ಗಳನ್ನು ಸೆಲೆಕ್ಟ್ ಮಾಡುವಾಗ ಬಹಳ ಕಟ್ಟುನಿಟ್ಟಾದ ನಿಯಮಗಳಿರುತ್ತವೆ, ಇವರು ಸುಮಾರು ನಾಲ್ಕು ತರಹ ಟೆಸ್ಟ್‌ಗಳನ್ನು ನಿಭಾಯಿಸ ಬೇಕಾಗಿದೆ. ಆದರಲ್ಲಿ ತೇರ್ಗಡೆಯಾಗಿ ಬಂದ ಮೇಲೆ ಐದನೇ ಟೆಸ್ಟ್ ವೈವಾ-ಓ.ಸಿ. ಈ ಟೆಸ್ಟ್‌ಗಳಲ್ಲಿ ಒಂದನೆಯದು ಫಿಸಿಕಲ್ ಎಫಿಷಿಯನ್ಸಿ ಇನ್ನೊಂದು ಲಿಫ್ಟಿಂಗ್ ಆಫ್ ವೇಟ್, ಮತ್ತೊಂದು ಜಂಪಿಂಗ್ ಮತ್ತು ರನ್ನಿಂಗ್ ಇತ್ಯಾದಿ, ಇತ್ಯಾದಿ ಅಭ್ಯರ್ಥಿಗಳ ಫಿಸಿಕಲ್ ಫಿಟ್‌ನೆಸ್ ನೋಡುವುದಕ್ಕೆ ಇಟ್ಟಿದೆ. ಇವೆಲ್ಲಾ ಟೆಸ್ಟ್‌ಗಳಲ್ಲಿ ಪಾಸಾದ ನಂತರವೇ ವೈವಾ ಓಸಿ. ಕಮಿಟಿ ಮುಂದೆ ಹಾಜರಾಗಿ ಪಾಸಾಗಬೇಕಾಗುತ್ತದೆ. ಪ್ರತಿಯೊಂದು ಟೆಸ್ಟ್‌ನಲ್ಲಿಯೂ ಮಾರ್ಕ್ಸ್ ಕೊಡುತ್ತಾರೆ. ಈ ಕಮಿಟಿಗೆ ಹೋಮ್ ಸೆಕ್ರೆಟರಿಗಳು ಪ್ರೆಸಿಡೆಂಟರು ಅದರಲ್ಲಿ ಐ.ಜಿ.ಪಿ. ಹಾಗೂ ಇನ್ನೂ ಮೂರು ನಾಲ್ಕು ಜನ ಆಧಿಕಾರಿಗಳಿರುತ್ತಾರೆ. ಹೀಗಿರುವಾಗ ಇವರಲ್ಲಿ ಯಾರೊಬ್ಬರ ಮೇಲೂ ಪ್ರಭಾವ ಬೀರಲು ಅವಕಾಶವಾಗುವುದಿಲ್ಲ ಮತ್ತು ಯಾರಿಂದಲೂ ಯಾರಿಗೂ ಸಹಾಯ ಮಾಡಲು ಸಾಧ್ಯವಾಗುವುದಿಲ್ಲ.

ಶ್ರೀ ಟಿ. ತಾರೇಗೌಡ .—ರಿಕ್ರೂಟ್‌ಮೆಂಟ್ ಕಮಿಟಿ ಎಂದು ಮಾಡಿಕೊಂಡು ಬರೀ ವಾಟೀಯವಾಗಿ ಎಲ್ಲವೂ ನಡೆಯುತ್ತಿವೆ. ಈ ರೀತಿಯಾಗಿ ಸೆಲೆಕ್ಷನ್ ಮಾಡುವುದನ್ನು ತಪ್ಪಿಸಿ ಬೇರೆ ವಿಧಾನ ಮಾಡಲು ಅವಕಾಶವಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಇದರಲ್ಲಿ ಅವರವರ ಭಾವನೆಗಳನ್ನು ಹೇಳಬಹುದು ಆದರೆ, ಇದಕ್ಕೆ ಸರಕಾರ ಕಾರಣವಲ್ಲ.

SRI G. PUTTASWAMY .—Has it come to the notice of the Government that there is no representation to the Scheduled Castes and Tribes in the several Committees constituted for recruitment of officials ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಷೆಡ್ಯೂಲ್ಡ್ ಕ್ಯಾಸ್ಟ್‌ಗಳವರಿಗೆ ಶೇಕಡಾ ೧೮ ರಷ್ಟು ರಿಸರ್ವೇಷನ್ ಎಷ್ಟಿದೆಯೋ ಅದನ್ನು ಅನುಸರಿಸಿಕೊಂಡೇ ಈ ರಿಕ್ರೂಟ್‌ಮೆಂಟ್ ಕಮಿಟಿಯವರೂ ಮಾಡುತ್ತಾರೆ ಅದರಂತೆ ನೇಮಕಗಳನ್ನು ಮಾಡುತ್ತಾರೆ.